

# ದೇವರೇ, ಹೀಗೇಕೆ ಮಾಡಿದೆ

■ ಪ್ರಕಾಶ ಎಸ್. ಮನ್ನಂಗಿ

ಇವನು ಟೆನಿಸ್ ಆಟದಲ್ಲಿ ಅಪಾರ ಯಶಸ್ಸು ಗಳಿಸಿದ್ದ. ಬದುಕಿನಲ್ಲಿ ಬೇಕಾದ ಸಂಪತ್ತು, ಕೀರ್ತಿ ಎಲ್ಲವೂ ಆತನಿಗೆ ಸಿಕ್ಕಿತ್ತು. ಈ ಸಮಯದಲ್ಲಿ ಎರಡು ಬಾರಿ ಹೃದಯಾಘಾತಕ್ಕೆ ಒಳಗಾಗಿ, ಶಸ್ತ್ರ ಚಿಕಿತ್ಸೆ ನಡೆಯಿತು. ಇನ್ನೇನು ಇದರಿಂದ ಆರಾಮಾಗಿ ಹೊರಬಂದ ಎನ್ನುವಷ್ಟರಲ್ಲಿ ಮತ್ತೊಂದು ರೋಗಕ್ಕೆ ತುತ್ತಾದ. ಅವನಿಗೆ ಅಸಂಖ್ಯಾತ ಅಭಿಮಾನಿಗಳಿದ್ದರು. ಅವರಿಗೆ ಈ ಸುದ್ದಿಯಿಂದ ಆಘಾತವಾಯಿತು. ಅನೇಕರು ಅವರಿಗೆ ಪತ್ರದ ಮೂಲಕ ಸಾಂತ್ವನ ಹೇಳುತ್ತಿದ್ದರು. ಅವರೆಲ್ಲರಿಗೆ ಈ ನೋವಿನಲ್ಲೂ ಉತ್ತರಿಸುತ್ತಿದ್ದ.

ಒಮ್ಮೆ ಒಬ್ಬ ಅಭಿಮಾನಿ ಬರೆದ ಪತ್ರ ಅವನ ಗಮನ ಸೆಳೆಯಿತು. 'ಅಯ್ಯೋ ದೇವರೇ, ನನಗೆ ಹೀಗೇಕೆ ಮಾಡಿದೆ ಎಂದು ದೇವರನ್ನು ಕೇಳಬೇಕು ಎಂದು ನಿಮಗೆ ಅನಿಸುವುದಿಲ್ಲವೇ' ಎಂದು ಪ್ರಶ್ನಿಸಿದ್ದ. ಇದನ್ನು ಓದಿದ ಆತ ಅಭಿಮಾನಿಗೆ ಹೀಗೆ ಪತ್ರ ಬರೆದ.

ನನ್ನ ಪ್ರಿಯ ಅಭಿಮಾನಿಗಳೇ, ನಾನು ಟೆನಿಸ್ ಆಡಲು ಆರಂಭಿಸಿದಾಗ ಜಗತ್ತಿನಲ್ಲಿ ಐದು ಕೋಟಿ ಜನರು ಆ ಆಟ ಆಡಲು ಪ್ರಾರಂಭಿಸಿರಬಹುದು. ಅವರಲ್ಲಿ ಸುಮಾರು 50 ಲಕ್ಷ ಆಟಗಾರರು ಜಿಲ್ಲಾ ಮಟ್ಟದ ಆಟಗಾರರಾಗಿ ಗುರುತಿಸಿಕೊಂಡವರು. ಇನ್ನು ಐದು ಲಕ್ಷ ಆಟಗಾರರು ರಾಜ್ಯ ಮಟ್ಟಕ್ಕೆ ಏರಿದ ಸಾಧಕರಿರಬಹುದು. ಐವತ್ತು ಸಾವಿರ ಆಟಗಾರರು ರಾಷ್ಟ್ರ ಮಟ್ಟದಲ್ಲಿ ಆಯಾ ದೇಶಗಳನ್ನು ಪ್ರತಿನಿಧಿಸಿರಬಹುದು. ಐದು ನೂರು ಆಟಗಾರರು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿರಬಹುದು. ಅವರಲ್ಲಿ ಐವತ್ತು ಜನ ವಿಂಬಲ್ಡನ್ನಿನ ಮೊದಲ ಸುತ್ತಿಗೆ ತಲುಪಿರಬಹುದು. ಕೊನೆಗೆ ಎಂಟು ಜನ ಕ್ವಾರ್ಟರ್ ಫೈನಲ್ ಭಾಗ್ಯ ಪಡೆದಿರಬಹುದು. ನಾಲ್ಕು ಜನ ಮಾತ್ರ ಸೆಮಿಫೈನಲ್ ಸುತ್ತಿನಲ್ಲಿ ಆಡಿರಬಹುದು. ಕೊನೆಗೆ ಇಬ್ಬರು ಮಾತ್ರ ಫೈನಲ್ ಆಟದಲ್ಲಿ ವಿಜೃಂಭಿಸಿದರು.

ಸುದೈವದಿಂದ ಆ ಇಬ್ಬರಲ್ಲಿ ನಾನೂ ಒಬ್ಬನಾಗಿದ್ದೆ ಎನ್ನುವುದು ಖುಷಿಯ ಸಂಗತಿ. ಕೊನೆಗೆ ವಿಂಬಲ್ಡನ್ ಸ್ಪರ್ಧೆಯಲ್ಲಿ ಗೆದ್ದು ಬೆಳ್ಳಿಯ ಕರಂಡಕವನ್ನು ಎತ್ತಿ ಹಿಡಿದು ನಿಂತಾಗ 'ಅಯ್ಯೋ ದೇವರೇ, ನನಗೆ ಹೀಗೇಕೆ ಮಾಡಿದೆ' ಎಂದು ಕೇಳಲಿಲ್ಲ. ಈಗ ಇಂಥ ಪ್ರಶ್ನೆಯನ್ನು ನಾನೇಕೆ ದೇವರನ್ನು ಕೇಳಲಿ ಹೇಳಿ.

ಈ ಪತ್ರವನ್ನು ತಮ್ಮ ಅಭಿಮಾನಿಗೆ ಬರೆದವರು ಆರ್ಥರ್ ಆಶ್. ಹೆಸರಾಂತ ಟೆನಿಸ್ ಆಟಗಾರರಾಗಿದ್ದ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್, ಫ್ರೆಂಚ್ ಓಪನ್ ಟೆನಿಸ್ ಹಾಗೂ ವಿಂಬಲ್ಡನ್ ಪ್ರಶಸ್ತಿಯನ್ನು ಗೆದ್ದವರು. ನಮಗೆ ಕಷ್ಟ ಬಂದಾಗ 'ದೇವರೇ, ಹೀಗೇಕೆ ಮಾಡಿದೆ, ದೇವರೇ, ನಿನಗೆ ಕಣ್ಣಿಲ್ಲವೇ ಹೀಗೇಕೆ ಮಾಡಿದೆ' ಎಂದು ಕೇಳುತ್ತೇವೆ. ಆದರೆ ಸುಖ ಬಂದಾಗ ಎಂದಾದರೂ ಹೀಗೆ ಕೇಳಿದ್ದೇವೆಯೇ? ಆಗ ದೇವರ ನೆನಪೂ ಬರುವುದಿಲ್ಲ. ಸದಾಕಾಲ ಮನುಷ್ಯ ಹಿಗ್ಗದೇ, ಕುಗ್ಗದೇ ಕಷ್ಟ– ಸುಖವನ್ನು ಅನುಭವಿಸಬೇಕು; ಎದುರಿಸಬೇಕು ಅಲ್ಲವೇ? (ಸಂಗ್ರಹ)